ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಜೆ. ಹೆಚ್. ಪಟೇಲರು ಇದು ಪ್ರಶ್ನೋತ್ತರ ವೇಳೆ ಎಂಬ ಮಾತನ್ನು ಹೇಳಿದ್ದಾರೆ. ಆಲ್ಲದೆ, ಇದಕ್ಕೆ ಹೆಚ್ಚು ಕಾಲ ಬೇಕಾಗುತ್ತದೆ. ಆದ್ದರಿಂದ ಇದನ್ನು ಬೇರೆ ನಿಯಮಾವಳಿ ಪ್ರಕಾರ ಚರ್ಚೆ ಮಾಡೋಣವೆಂದು ಹೇಳಿದ್ದಾರೆ. ಯಾವ ನಿಯಮಾವಳಿಯ ಪ್ರಕಾರ ಚರ್ಚೆ ಮಾಡಬೇಕು ಅದಕ್ಕೆ ನೀವು ಒಪ್ಪುತ್ತೀರಾ? ಪ್ರತ್ಯೇಕವಾಗಿ ಚರ್ಚೆ ಮಾಡುವುದಕ್ಕೆ ನಾವು ಒಪ್ಪುತ್ತೇವೆ.

ಶ್ರೀ ಜೆ. ಹೆಚ್. ಪಟೇಲ್.—ಮೊದಲೇ ಹೇಳಿದ್ದೇನೆ, ಚರ್ಚೆಯಂ ಅವಶ್ಯಕತೆ ಇದ್ದರೆ ಎಂದು.

ಶ್ರೀ ಎಸ್. ಬಂಗಾರಪ್ಪ.—ಇವತ್ತು ಅಥವಾ ನಾಳೆ ಇದರ ಬಗ್ಗೆ ಚರ್ಚೆಗೆ ಅವಕಾಶ ಮಾಡಿಕೊಡಿ.

ಬಳ್ಳಾರಿ ನಗರದಲ್ಲಿ ಶಾಲೆ ಮತ್ತು ಉದ್ಯಾನವನಗಳಿಗಾಗಿ ನಿವೇಶನಗಳನ್ನು ನೀಡುವುದು

೧೨೧೩. ಶ್ರೀ ಎಂ. ರಾಮಪ್ಪ (ಬಳ್ಳಾರಿ) ಮಾನ್ಯ ನಗರಾಭಿವೃದ್ಧಿ, ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಳ್ಳಾರಿಯಲ್ಲಿ ೧೯೬೦ರಿಂದ ಈವರೆವಿಗೂ ನೆಹರೂ ಕಾಲೋನಿ, ಶಾಸ್ತ್ರಿನಗರ, ಪೇತಯ್ಯ ನಗರ, ಶಂಕರ್ ಕಾಲೋನಿ, ಬಸವೇಶ್ವರ ಕಾಲೋನಿ ಇಂತಹ ಹಲವು ಹೊಸ ಬಡಾವಣೆಗಳು ನಿರ್ಮಾಣ ವಾಗಿರುವ ವಿಷಯ ಸರಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಶಾಲಾ ಕಟ್ಟಡಗಳಿಗೆ ಮತ್ತು ಉದ್ಯಾನವನಗಳಿಗೆ ನಿವೇಶನಗಳು ವಂಜೂರು ಆಗಿರುವ ಬಡಾವಣೆಗಳ ಸಂಖ್ಯೆ ಎಷ್ಟು?

ಇ) ಶಾಲಾ ಕಟ್ಟಡಗಳ ನಿರ್ಮಾಣಕ್ಕಾಗಿ ಈ ನಿವೇಶನಗಳನ್ನು ಶಿಕ್ಷಣ ಇಲಾಖೆಗೆ ಹಸ್ತಾಂತರ ಗೊಳಿಸಲಾಗಿದೆಯೇ, ಹಾಗಿಲ್ಲದಿದ್ದಲ್ಲಿ ಈವರೆವಿಗೂ ಹಸ್ತಾಂತರಿಸದಿರಲು ಕಾರಣಗಳೇನು?

ಶ್ರೀ ಎ. ಲಕ್ಷ್ಮೀಸಾಗರ್ (ನಗರಾಭಿವೃದ್ಧಿ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಮಂತ್ರಿಗಳು).—

ಅ) ಬಂದಿದೆ.

ಆ) ಮೂರು.

ಇ) ಉಳಿದ ಬಡಾವಣೆಗಳು ಖಾಸಗಿ ಲೇ ಔಟುಗಳಾಗಿವೆ. ಆದ್ದರಿಂದ ನಿವೇಶನಗಳನ್ನು ಶಿಕ್ಷಣ ಇಲಾಖೆಗೆ ಹಸ್ತಾಂತರಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಆರ್. ಎನ್. ನಾಯಂಕ್.—ಸನ್ಮಾನ್ಯ ಅಧ್ಯಕ್ಷರೇ, ಖಾಸಗಿ ಲೇ ಔಟ್ಸ್‌ಗಳು ಆಗಿದ್ದರೂ ಸಹಾ ಅಲ್ಲಿ ಶಾಲೆಗಳ ಅವಶ್ಯಕತೆ ಇದ್ದಲ್ಲಿ ಅಂತಹ ಕಡೆ ಶಾಲೆಗಳನ್ನು ಕೊಡುವುದಕ್ಕೋಸ್ಕರವಾಗಿ ಆ ಸ್ಥಳವನ್ನು ಅಕ್ವಿಜಿಷನ್ ಮಾಡಿಕೊಂಡು ಕೊಡುವ ವ್ಯವಸ್ಥೆಯನ್ನು ತಾವು ಮಾಡಿದ್ದೀರಾ? ಮಾಡದೇ ಹೋಗಿದ್ದರೆ ಮಾಡುವ ಆಲೋಚನೆ ಏನಾದರೂ ಇದೆಯೇ ಹೇಗೆ?

ಶ್ರೀ ಎ. ಲಕ್ಷ್ಮೀಸಾಗರ್.—ಅದರ ಬಗ್ಗೆ ಬೇಡಿಕೆ ಬಂದ ಮೇಲೆ ಆ ವಿಚಾರದಲ್ಲಿ ನಿರ್ಧಾರ ತೆಗೆದುಕೊಳ್ಳುತ್ತೇನೆ.

ಶಹಬಾದ್ ಕ್ಷೇತ್ರದಲ್ಲಿ ಸಾರಿಗೆ ಸೌಲಭ್ಯಗಳು

೧೬೦. ಶ್ರೀ ಕೆ. ಬಿ. ಶಾಣಪ್ಪ (ಶಹಬಾದ್) ಮಾನ್ಯ ಸಾರಿಗೆ ಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ?

ಅ) ಶಹಬಾದ್ ಕ್ಷೇತ್ರದಲ್ಲಿ ಎಷ್ಟು ಹಳ್ಳಿಗಳಿದ್ದು, ಅವುಗಳಲ್ಲಿ ಎಷ್ಟು ಹಳ್ಳಿಗಳಿಗೆ ಸಾರಿಗೆ ಸಂಸ್ಥೆಯವರು ಬಸ್ಸುಗಳನ್ನು ಓಡಿಸುತ್ತಿದ್ದಾರೆ?

ಆ) ಸಾರಿಗೆ ಸೌಲಭ್ಯವನ್ನು ಹೊಂದದ ಹಳ್ಳಿಗಳಿಗೆ ಯಾವಾಗ ಸಾರಿಗೆ ಸೌಲಭ್ಯವನ್ನು ಒದಗಿಸಲಾಗುವುದು?

ಇ) ಗುಲ್ಬರ್ಗ ವಿಭಾಗದಲ್ಲಿ ಓಡಾಡುವ ಬಸ್ಸುಗಳ ಸಂಖ್ಯೆ ಎಷ್ಟು? ಮತ್ತು ಅವುಗಳಲ್ಲಿ ಬೇರೆ ಜಿಲ್ಲೆಗಳಿಗೆ ಹೋಲಿಸಿದಾಗ ಎಷ್ಟು ಸಂಖ್ಯೆಯಲ್ಲಿ ಇವೆ?